ಸಮ್ಮೇಳನಕ್ಕೆ ಬಾರದ ಉಸ್ತುವಾರಿ ಸಚಿವರು, ಅಧಿಕಾರಿಗಳು | ನೀತಿ-ನಿರೂಪಕರ ನಿರ್ಲಕ್ಷ್ಯದಿಂದ ಕೆರೆ ಕಣ್ಮರೆ

# ಕೆರೆ ರಕ್ಷಣೆ ಮರೆತ ಜನಪ್ರತಿನಿಧಿಗಳು, ಅಧಿಕಾರಿಗಳು

ಕನ್ನಡ ಪ್ರಭ, 16/11/2014, Page no.: 3

• ವಿಶ್ವಾಮಿತ್ರ ಹೆಗಡೆ

**ಕನ್ನಡಪ್ರಭ ವಾರ್ತೆ, ಶಿರಸಿ, ನ. 15**

ಶಿರಸಿ ತಾಲೂಕಿನ ಸೋಂದಾ ಸ್ವರ್ಣವಲ್ಲೀ ಮಠದಲ್ಲಿ ನ. 13ರಿಂದ ರಾಷ್ಟ್ರಮಟ್ಟದ ಕೆರೆ ಸಮ್ಮೇಳನ ಆರಂಭಗೊಂಡಿತು. ಕೇಂದ್ರ ಸಚಿವ ಅನಂತಕುಮಾರ್, ಸ್ಥಳೀಯ ಶಾಸಕ ವಿಶ್ವೇಶ್ವರ ಹೆಗಡೆ ಕಾಗೇರಿ ಹೊರತುಪಡಿಸಿದರೆ ಉಳಿದವರು ಕೆರೆಯ ನೀರಿಂದ ದೂರ ಉಳಿದಿದ್ದರು.

ಕೆರೆಯ ಅವಶ್ಯಕತೆ, ಕೆರೆಯ ಉಪಯೋಗ, ಕೆರೆಯ ಮಲಿನತೆ, ಕಣ್ಮರೆಯಾಗುತ್ತಿರುವ ಕೆರೆಗಳು ಹೀಗೆ ಕೆರೆಯ ಹಲವು ಮಜಲುಗಳ ಕುರಿತಂತೆ ಸಮ್ಮೇಳನದಲ್ಲಿ ಚರ್ಚೆಗಳು ನಡೆದವು. ಜಾಗತಿಕ ತಾಪಮಾನ ಹೆಚ್ಚುತ್ತಿದ್ದು, ಕರ್ನಾಟಕವೂ ಸೇರಿದಂತೆ ನಾನಾ ಪ್ರದೇಶಗಳಲ್ಲಿಯ ವಾತಾವರಣದಲ್ಲಿಯ ವ್ಯತ್ಯಾಸಕ್ಕೆ ಮೂಲ ಕಾರಣ ಹುಡುಕುವ ಪ್ರಯತ್ನ ಈ ಸಮ್ಮೇಳನದಲ್ಲಿ ನಡೆಯಿತು. ಭಾರತೀಯ ವಿಜ್ಞಾನ ಸಂಸ್ಥೆಯ ನೇತೃತ್ವದಲ್ಲಿ ನಡೆದ ಸಮ್ಮೇಳನದಲ್ಲಿ 35ಕ್ಕೂ ಅಧಿಕ ಅಧ್ಯಯನ ವರದಿಗಳು ಬಿಡುಗಡೆಗೊಂಡವು. ಈ ವರದಿಗಳು ಭವಿಷ್ಯತ್ತಿನ ದಿಕ್ಸೂಚಿ ಎಂದೇ ಭಾವಿಸಲಾಗಿದೆ. ನೀತಿ ನಿರೂಪಕರು ಅಧ್ಯಯನ ವರದಿಯ ಅಧ್ಯಯನ ಮಾಡಬೇಕಾದ ಅಗತ್ಯವಿದ್ದರೆ, ಅವರು ಸಮ್ಮೇಳನದಿಂದಲೇ ದೂರ ಉಳಿದಿರುವುದು ಗೊಂದಲಗಳಿಗೆ ಕಾರಣವಾಗಿದೆ.

ಕೆರೆ ಪುನರುಜ್ಜೀವನಗೊಳಿಸುವುದೂ ಸೇರಿದಂತೆ ಕೆರೆಗೆ ಸಂಬಂಧಿಸಿದ ಇಲಾಖೆಗಳು ಮತ್ತು ಅದರ ಮುಖ್ಯಸ್ಥರು ಇಂತಹ ಸಮ್ಮೇಳನದಲ್ಲಿ ಭಾಗವಹಿಸುವ ಮೂಲಕ ಕೆರೆ ಉಳಿಸಿ, ಬೆಳೆಸುವ ಯೋಜನೆಗೆ ಮುನ್ನುಡಿ ಬರೆಯಬೇಕಾಗಿತ್ತು.



**ಕೆರೆ ಸಂರಕ್ಷಣಾ ಸಾಧಕರನ್ನು ಸನ್ಮಾನಿಸಲಾಯಿತು.**

ಪ್ರವಾಸೋದ್ಯಮಕ್ಕೂ, ಕೆರೆಗೂ ನಂಟಿದೆ. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ ರಾಜ್ ಇಲಾಖೆಗೂ ನಿಕಟ ಸಂಬಂಧವಿದೆ. ಅರಣ್ಯ ಪರಿಸರ ಇಲಾಖೆಗೆ ಕೆರೆಯ ಸಂಬಂಧ ಪ್ರಾಚೀನವಾದದ್ದು. ಔಷಧಿ ಮಾಲಿಕಾ ಪ್ರಾಧಿಕಾರಕ್ಕೂ ಕೆರೆಗೂ ಪೂರಕ ಸಂಬಂಧಗಳಿವೆ. ಹಾಗಾಗಿಯೇ ಈ ಎಲ್ಲ ಇಲಾಖೆಗಳ ಮುಖ್ಯಸ್ಥರ ಉಪಸ್ಥಿತಿಯನ್ನು ಬಯಸಲಾಗಿತ್ತು.

ಶತ ಶತಮಾನಗಳಿಂದ ದೇಶದ ಜೀವನಾಡಿಯಾಗಿರುವ ಅದೆಷ್ಟೋ ಕೆರೆಗಳು ಈಗ ಕಣ್ಮರೆಯಾಗಿವೆ. ಕಣ್ಮರೆಯಾಗುತ್ತಲೂ ಇವೆ. ಅತಿಕ್ರಮಣದಾರರ ಹಾವಳಿ, ಹೂಳು ತುಂಬುವುದು ಮುಂತಾದ ಕಾರಣಗಳಿಗಾಗಿ ದೊಡ್ಡ ದೊಡ್ಡ ಕೆರೆಗಳು ಸಣ್ಣ ಕೆರೆಗಳಾಗುತ್ತಿದೆ. ಸಣ್ಣ ಕೆರೆಗಳು ಕಣ್ಮರೆಯಾಗುತ್ತಿವೆ. ಮತ್ತೊಂದು ಕಡೆ ಅಕಾಲಿಕ ಮಳೆಗಾಲ, ಬರಗಾಲ, ಅತಿವೃಷ್ಟಿ, ಅನಾವೃಷ್ಟಿ ಹೀಗೆ ಪ್ರಕೃತಿ ವಿಕೋಪಗಳು ಒಂದರ ಹಿಂದೊಂದರಂತೆ ಜನರನ್ನು ಹೈರಾಣಾಗಿಸುತ್ತಿದೆ. ಭಾರಿ ಪ್ರಮಾಣದ ಪ್ರಕೃತಿ ವಿಕೋಪ ಘಟಿಸಿದಾಗ ಎಚ್ಚೆತ್ತುಕೊಳ್ಳುವ ಆಡಳಿತ ಯಂತ್ರ ತದನಂತರದ ದಿನಗಳಲ್ಲಿ ಅದನ್ನು ಮರೆತೇ ಬಿಡುತ್ತದೆ.

**ನದಿಯ ಮೂಲಗಳೆಲ್ಲವೂ ಕೆರೆಗಳೆ ಆಗಿವೆ. ಅಂತಹ ಮೂಲಗಳನ್ನೂ ಸಂರಕ್ಷಿಸಲು ವಿಫಲರಾಗಿರುವ ಹಿನ್ನೆಲೆಯಲ್ಲಿ ಕೆರೆ ಸಮ್ಮೇಳನ ಮಹತ್ವ ಪಡೆದುಕೊಳ್ಳುತ್ತದೆ. ಆಡಳಿತ ಯಂತ್ರದ ಚುಕ್ಕಾಣಿ ಹಿಡಿದವರು, ಇಂತಹ ಅಮೂಲ್ಯ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರೆ ಹಲವಾರು ಯೋಜನೆಗಳನ್ನು ಜಾರಿಗೊಳಿಸಬಹುದಾಗಿತ್ತು.**

## ಗಣ್ಯರ ಅನುಪಸ್ಥಿತಿ

ಪ್ರವಾಸೋದ್ಯಮ ಸಚಿವರು ಮತ್ತು ಜಿಲ್ಲಾ ಉಸ್ತುವಾರಿ ಹೊಣೆಯನ್ನು ಹೊತ್ತಿರುವ ಆರ್.ವಿ. ದೇಶಪಾಂಡೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಎಚ್.ಕೆ. ಪಾಟೀಲ, ಸಂಸದ ಅನಂತಕುಮಾರ್ ಹೆಗಡೆ, ಅರಣ್ಯ ಪರಿಸರ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿ ಮದನಗೋಪಾಲ, ಔಷಧ ಮಾಲಿಕಾ ಪ್ರಾಧಿಕಾರದ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಯು.ವಿ. ಸಿಂಗ್ ಅನುಪಸ್ಥಿತಿ ಎದ್ದು ಕಾಣುತ್ತಿತ್ತು.

**ಅಧ್ವಾನಗಳಿಗೆ ಕಾರಣ:** ಕೆರೆಗಳು ಜಲಭಂಡಾರ ಎಂದೇ ಕರೆಸಿಕೊಳ್ಳುತ್ತಿದೆ. ಹಿಂದೆ ರಾಜ ಮಹಾರಾಜರು ಅಗತ್ಯವಿರುವಲ್ಲೆಲ್ಲ ವಿಶಾಲವಾದ ಕೆರೆಯನ್ನು ಕಟ್ಟಿಸಿದರು. ಅಂದು ವಿಜ್ಞಾನ ಇಷ್ಟು ಬೆಳೆಯದಿದ್ದರೂ ದೂರದೃಷ್ಟಿತ್ವದಿಂದಾಗಿಯೇ ಕೆರೆಗಳು ಜನ-ಜಾನುವಾರುಗಳ ದಾಹ ತಣಿಸಿದವು. ಪ್ರಸ್ತುತದಲ್ಲಿ ನಡೆಯುತ್ತಿರುವ ಹಲವಾರು ಅಧ್ವಾನಗಳಿಗೆ ಕೆರೆ ಕಣ್ಮರೆಯಾಗುತ್ತಿರುವುದೇ ಕಾರಣ ಎಂಬುದು ವಿಜ್ಞಾನಿಗಳ ಅಭಿಮತವಾಗಿದೆ.

ನದಿಯ ಮೂಲಗಳೆಲ್ಲವೂ ಕೆರೆಗಳೆ ಆಗಿವೆ ಅಥವಾ ತೀರ್ಥಕ್ಷೇತ್ರಗಳೇ ಆಗಿವೆ. ಅಂತಹ ಮೂಲಗಳನ್ನೂ ಸಂರಕ್ಷಿಸಲು ವಿಫಲರಾಗಿರುವ ಹಿನ್ನೆಲೆಯಲ್ಲಿ ಕೆರೆ ಸಮ್ಮೇಳನ ಸಾಕಷ್ಟು ಮಹತ್ವ ಪಡೆದುಕೊಳ್ಳುತ್ತದೆ. ಆಡಳಿತ ಯಂತ್ರದ ಚುಕ್ಕಾಣಿ ಹಿಡಿದವರು, ಎಲ್ಲ ಸ್ತರದ ಜನಪ್ರತಿನಿಧಿಗಳು ಇಂತಹ ಅಮೂಲ್ಯವಾದ ಸಮ್ಮೇಳನ ಅಥವಾ ಚರ್ಚೆಗಳಲ್ಲಿ ಪಾಲ್ಗೊಂಡಿದ್ದರೆ ಹಲವಾರು ನವನವೀನ ಯೋಜನೆಗಳನ್ನು ಜಾರಿಗೊಳಿಸಬಹುದಾಗಿತ್ತು. ತನ್ಮೂಲಕ ನೀರಿನ ಕೊರತೆ ನೀಗಿಸುವುದೊಂದೇ ಅಲ್ಲ, ಪ್ರಕೃತಿ ಮಾತೆಯ ಕೃಪೆಗೂ ಪಾತ್ರರಾದಂತಾಗುತ್ತಿತ್ತು.

ಪ್ರಕೃತಿಯಲ್ಲಾಗುತ್ತಿರುವ ತಲ್ಲಣ, ತಳಮಳಗಳಿಗೆ ಈಗಲೂ ಪೂರ್ಣವಿರಾಮ ಹಾಕದಿದ್ದರೆ ಭವಿಷ್ಯ ಭೀಕರವಾಗುವುದರಲ್ಲಿ ಸಂದೇಹವಿಲ್ಲ. ಭೂ ಕುಸಿತ, ಜಲಪ್ರಳಯ, ಕಂಡು ಕೇಳರಿಯದ ಬರ, ಈ ಮುಂತಾದ ಪ್ರಕೃತಿ ವಿಕೋಪಗಳನ್ನು ಸಮರ್ಪಕವಾಗಿ ಎದುರಿಸಬೇಕಾದರೆ ಜಲಮೂಲಗಳ ಸಂರಕ್ಷಣೆ, ಅಭಿವೃದ್ಧಿ, ಸ್ವಚ್ಛತೆ ಅತಿ ಅಗತ್ಯವಾಗಿದೆ. ಆಳರಸರು ಕೇವಲ ಭಾರಿ ಯೋಜನೆಗಳಿಗೆ ಆದ್ಯತೆ ನೀಡುವ ಬದಲು ಕೆರೆಗಳ ಪುನಶ್ಚೇತನ, ಸಂಸ್ಕರಣೆ, ನವೀಕರಣ ಮುಂತಾದ ಕಾಮಗಾರಿಗಳಿಗೆ ಆದ್ಯತೆ ನೀಡಿದಾಗ ಹಲವಾರು ಸಮಸ್ಯೆಗಳಿಗೆ ಉತ್ತರ ಕಂಡುಕೊಳ್ಳಬಹುದಾಗಿತ್ತು. ಅಂತಹ ಎಲ್ಲ ಅವಕಾಶಗಳನ್ನು ಕೈಚೆಲ್ಲುತ್ತಿರುವ ಜನಪ್ರತಿನಿಧಿಗಳು, ಅಧಿಕಾರಿಗಳು, ಆಡಳಿತ ಯಂತ್ರದ ಚುಕ್ಕಾಣಿ ಹಿಡಿದವರ ಮನೋಭಾವ ಪ್ರಶ್ನಾರ್ಹವಾಗಿದೆ.